International Journal of Kannada Research
www.kannadajournal.com

ISSN: 2454–5813
IJKR 2018; 4(3): 154-157
© 2018 IJKR
www.kannadajournal.com
Received: 28-05-2018
Accepted: 29-06-2018

**ಡಾ.ವೈ.ರಂಗನಾಥ**
ಇತಿಹಾಸ ಉಪನ್ಯಾಸಕರು,
ಸರ್ಕಾರಿ ಬಾಲಕಿಯರ ಪದವಿ
ಪೂರ್ವ ಕಾಲೇಜು,
ರಾಜೀವ್‌ನಗರ, ಮೈಸೂರು

Correspondence
**ಡಾ.ವೈ.ರಂಗನಾಥ**
ಇತಿಹಾಸ ಉಪನ್ಯಾಸಕರು,
ಸರ್ಕಾರಿ ಬಾಲಕಿಯರ ಪದವಿ
ಪೂರ್ವ ಕಾಲೇಜು,
ರಾಜೀವ್‌ನಗರ, ಮೈಸೂರು

# ತಗಡೂರು ಗ್ರಾಮದ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ

**ಡಾ.ವೈ.ರಂಗನಾಥ**

ಭಾರತವು ಸಾಂಪ್ರದಾಯಿವಾಗಿ, ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದು ತನ್ನ ಒಡಲಲ್ಲಿ ಹಲವಾರು ವಿಷೇಶತೆಗಳನ್ನು ಇಟ್ಟುಕೊಂಡಿದೆ. ಅವುಗಳಲ್ಲಿ ಪ್ರಮುಖವಾಗಿ ದೇವಾಲಯಗಳು ಕಾಣಸಿಗುತ್ತವೆ. ದೇವಾಲಯಗಳ ನಿರ್ಮಾಣ ಪ್ರಮುಖವಾಗಿದ್ದು ಅವುಗಳ ಕಲೆ ಮತ್ತು ವಾಸ್ತುಶಿಲ್ಪವು ಬಹಳ ಮುಖ್ಯವಾಗಿದ್ದು ಹಾಗೆಯೇ ತಗಡೂರು ಗ್ರಾಮದ ಪರಿಸರದ ಒಡಲಿನಲ್ಲಿ ಹಲವು ದೇವಾಲಯಗಳನ್ನು ಕಾಣಬಹುದು. ಅವುಗಳ ವಾಸ್ತುಶಿಲ್ಪ ರಚನೆ ಅವುಗಳ ವಿನ್ಯಾಸದ ವಿವರಗಳು ದೇವಾಲಯಗಳು ಒಳಗೊಂಡಿರುವ ಶೈಲಿ ಭಿನ್ನತೆ ನಿರ್ಮಾಣದ ಕಾಲ ಮುಂತಾದವನ್ನು ಇಲ್ಲಿ ವಿವರಿಸಬಹುದಾಗಿದೆ.

**ಮೂಲಸ್ಥಾನೇಶ್ವರ ದೇವಾಲಯ**

ತಗಡೂರು ಗ್ರಾಮದ ಅತಿ ಪ್ರಾಚೀನ ದೇವಾಲಯಗಳಲ್ಲಿ ಮೂಲ ಸ್ಥಾನೇಶ್ವರ ದೇವಾಲಯವು ಒಂದಾಗಿದೆ. ಸುಮಾರು 5ಫಿ5 ಉದ್ದ ಮತ್ತು ಅಗಲವನ್ನು ಹೊಂದಿದ ಗರ್ಭಗುಡಿ, ಸುಖನಾಸಿ, ನವರಂಗ ಅದರ ಮುಂದುಗಡೆ ಮತ್ತೊಂದು ನಾಲ್ಕು ಕಂಬಗಳನ್ನು ಒಳಗೊಂಡ ಒಂದು ರಂಗ ನಂತರ ನಾಲ್ಕು ಕಂಬವುಳ್ಳ ಮುಖ ಮಂಟಪವನ್ನು ಒಳಗೊಂಡಿದೆ. ಈ ದೇವಾಲಯ ಶೈವ ದೇವಾಲಯವಾಗಿದ್ದು ಇದನ್ನು ಕ್ರಿ.ಶ. 14 ಮತ್ತು 15ನೇ ಶತಮಾನದಲ್ಲಿ ವಿಜಯನಗರ ಅರಸು ಮತ್ತು ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣವಾಯಿತ್ತೆಂದು ತಿಳಿಯಲಾಗಿದೆ.ಗರ್ಭಗುಡಿಯಲ್ಲಿ ಶಿವಲಿಂಗವಿದ್ದು ಇದು 3 ಅಡಿ ಎತ್ತರವಿದೆ. ಈ ಲಿಂಗವನ್ನು ಎತ್ತರವಾದ ಪಾಣಿ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹವು ಚೌಕಟ್ಟಾಗಿದ್ದು, 5ಫಿ5ಉದ್ದ ಮತ್ತು ಅಗಲವಾಗಿದೆ. ಚೌಕಟ್ಟಾದ ದ್ವಾರವನ್ನು ಹೊಂದಿದೆ. ಸುಖನಾಸಿ ಗರ್ಭಗೃಹದಷ್ಟೇ ವಿಸ್ತೀರ್ಣವನ್ನು ಹೊಂದಿದ್ದು ನಂತರ ನವರಂಗ ಉತ್ತಮವಾಗಿದ್ದು ಸುಂದರ ಕಂಬಗಳಿಂದ ಕೂಡಿದೆ. ನವರಂಗದಲ್ಲಿ ಯಾವುದೇ ವಿಗ್ರಹಗಳು ಕಂಡುಬಂದಿಲ್ಲ. ನಂತರ ಮುಂದುವರೆದು ಇಲ್ಲಿಯು ಸಹ ನಾಲ್ಕು ಸಾಮಾನ್ಯ ಕಂಬಗಳು ಇದ್ದು ಇಲ್ಲಿ ಉತ್ಸವಮೂರ್ತಿ ಮತ್ತಿತರ ಪರಿಕರ ಇಡಲು ಒಂದು ಕೊಠಡಿಯು ಸಹ ಇದೆ. ಇದು ಮುಂದುವರಿದು ನಾಲ್ಕು ಕಂಬಗಳನ್ನು ಒಳಗೊಂಡಿದ್ದು ದಕ್ಷಿಣ ಭಾಗದಲ್ಲಿಯೂ ಎರಡು ಕಂಬಗಳ ಮುಖಮಂಟಪವನ್ನು ಕಾಣಬಹುದು.

**ಏರು ವಿನ್ಯಾಸ**: ಈ ದೇವಾಲಯದ ಏರುವಿನ್ಯಾಸ ವಿಭಿನ್ನವಾಗಿದ್ದು ಸಾಮಾನ್ಯವಾಗಿದೆ. ಅದಿಷ್ಠಾನವು ಕಂಡುಬಂದಿಲ್ಲ. ತಳಪಾಯದಿಂದಲೇ ಕಲ್ಲು ಚಪ್ಪಡಿಗಳನ್ನು ಜೋಡಿಸಿ ಭಿತ್ತಿಯನ್ನು ನಿರ್ಮಾಣ ಮಾಡಿದ್ದಾರೆ. ಭಿತ್ತಿಯಲ್ಲಿ ಯಾವುದೇ ಕೆತ್ತನೆ, ವಿಗ್ರಹಗಳು, ಉಬ್ಬುಶಿಲ್ಪಗಳು ಕಂಡುಬಂದಿಲ್ಲ. ಕಪೋತವನ್ನು ಕಾಣಬಹುದಾಗಿದ್ದು ಕಪೋತವು ಸಹ ಸಾಮಾನ್ಯವಾಗಿದ್ದು ಕೂಡುಗಳ ರಚನೆಯು ಕಂಡುಬಂದಿದ್ದು ಅರ್ಧ ಚಂದ್ರಾಕೃತಿಯಲ್ಲಿವೆ. ಗೋಪುರದ ಯಾವುದೇ ಅವಶೇಷ ಇಲ್ಲಿ ಕಂಡು ಬಂದಿರುವುದಿಲ್ಲ ಆದ್ದರಿಂದ ಗೋಪುರವನ್ನು ನಿರ್ಮಿಸಿಲ್ಲ ಎಂಬ ಅಭಿಪ್ರಾಯ ಹೊಂದಲಾಗಿದೆ.

**ಕಂಬಗಳು**: ನವರಂಗದಲ್ಲಿ 4 ಕಂಬಗಳಿದ್ದು ಹೊಯ್ಸಳ ಶೈಲಿಯಲ್ಲಿವೆ. ಇವುಗಳು ಬಹಳ ವಿಶೇಷವಾಗಿದ್ದು, ಪೀಠ, ಪಾದ, ವೃತ್ತಾಕಾರದ ಗಾಡಿ, ಲಶುನ, ತಾಟಿಕಾ, ಘಟ, ಮಂಡಿ, ವೀರಕಂಠ, ಬೋಧಿಗೆ, ಗ್ರೀವ, ಶಿರವನ್ನು ಒಳಗೊಂಡಿದೆ. ಅದರ ಮೇಲೆ ಕಲ್ಲಿನ ತೊಲೆಗಳನ್ನು ಕೂರಿಸಿ ಕಲ್ಲು ಚಪ್ಪಡಿಯಿಂದ ಛಾವಣಿಯನ್ನು ಮುಚ್ಚಿದ್ದಾರೆ. ಕಂಬಗಳು ಸುಂದರ ರಚನೆಯಿಂದ ಕೂಡಿವೆ. ನವರಂಗ ಮುಂದಿನ ಅಜಾರದಲ್ಲಿ ನಾಲ್ಕು ಕಂಬಗಳಿದ್ದು ಸಾಮಾನ್ಯ ರಚನೆಯ ಎಡರು ಕಂಬಗಳನ್ನು ಒಳಗೊಂಡ ದಕ್ಷಿಣಭಾಗದ ಮುಖ ಮಂಟಪವನ್ನು ಕಾಣಬಹುದು.

**ಮೂರ್ತಿ ಶಿಲ್ಪಗಳು**: ಈ ದೇವಾಲಯದಲ್ಲಿ ಮೂರ್ತಿ ಶಿಲ್ಪಗಳು ಕಂಡುಬಂದಿದ್ದು ಗರ್ಭಗೃಹದಲ್ಲಿ ಶಿವಲಿಂಗವು 3 ಅಡಿ ಎತ್ತರವಿದೆ. ಎತ್ತರವಾದ ಪಾಣಿಪೀಠದ ಮೇಲೆ ಎಳೆದ ಇಂಗ್ಲೀಷ್ ಅಕ್ಷರದ ಖ ಆಕಾರದ ಕಪೋತ ನಂತರ ಚೌಕಾಕಾರದ ದಿಂಡಿನ ಮೇಲೆ ಪ್ರತಿಷ್ಠಾಪಿಸಲಾಗಿದೆ. ಇಲ್ಲಿ ದ್ವಾರಪಾಲಕರು ಕಂಡುಬಂದಿಲ್ಲ. ನವರಂಗದಲ್ಲೂ ಯಾವುದೇ ವಿಗ್ರಹ ಕಂಡುಬಂದಿಲ್ಲ. ನವರಂಗದ ಮುಂದಿನ ಹಜಾರದಲ್ಲಿ ನಂದಿಯು ಗರ್ಭಗುಡಿಗೆ ಮುಖ ಮಾಡಿರುವ ಹಾಗೆ ಪ್ರತಿಷ್ಠಾಪಿಸಿದ್ದಾರೆ. ಮಹಾವಿಷ್ಣು ಶಿಲ್ಪ, ಮಹಾಬಲೇಶ್ವರ ಸ್ವಾಮಿ ಲಿಂಗದ ವಿಗ್ರಹ, ವೀರಭದ್ರೇಶ್ವರ ಸ್ವಾಮಿ ವಿಗ್ರಹ, ಸುಬ್ರಹ್ಮಣೇಶ್ವರಸ್ವಾಮಿ ವಿಗ್ರಹಗಳು ಕಂಡುಬಂದಿವೆ.

**ದ್ವಾರಗಳು ಹಾಗೂ ಮಂಟಪ**: ಗರ್ಭಗುಡಿಯಿಂದ ಸುಖನಾಸಿ ನವರಂಗಕ್ಕೆ ಒಂದೊಂದು ಬಾಗಿಲನ್ನು ನಿರ್ಮಿಸಿದ್ದು ನವರಂಗದಿಂದ ಹಜಾರಕ್ಕೆ ಒಂದು ಬಾಗಿಲು ನಿರ್ಮಿಸಲಾಗಿದೆ. ಹಜಾರದಿಂದ ಎರಡುಭಾಗದಲ್ಲಿ ಪೂರ್ವಕ್ಕೆ ದ್ವಾರವು ನಾಲ್ಕು ಕಂಬದ ಮುಖಮಂಟಪ ಹೊಂದಿದೆ. ದಕ್ಷಿಣದ ದ್ವಾರವು ಎರಡು ಕಂಬದ ಮುಖ ಮಂಟಪ ಹೊಂದಿದೆ. ದ್ವಾರವು ಸಾಮಾನ್ಯವಾಗಿದ್ದು ಯಾವುದೇ ಬಳ್ಳಿ ಸುರುಳಿಯ ರಚನೆ ಕಾಣಸಿಗುವುದಿಲ್ಲ. ಹೊಸಿಲನ್ನು ಮಾತ್ರ ಒಳಗೊಂಡಿದೆ. ಅದಕ್ಕೆ ಇತ್ತೀಚಿನ ದಿನಗಳಲ್ಲಿ ಕಬ್ಬಿಣದ ಬಾಗಿಲು ಅಳವಡಿಸಲಾಗಿದೆ. ಈ ಮುಖಮಂಟಪಗಳನ್ನು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯದ ವಾಯುವ್ಯ ಭಾಗದಲ್ಲಿ ಒಂದು ಮಂಟಪವಿದ್ದು 16 ಕಂಬಗಳನ್ನು ಒಳಗೊಂಡಿದೆ. ಚೌಕಟ್ಟಾದ ಕಂಬಗಳ ಮೇಲೆ ಕಲ್ಲಿನ ಚಪ್ಪಡಿಗಳನ್ನು ಅಳವಡಿಸಿ ಇದನ್ನು ನಿರ್ಮಿಸಿದ್ದಾರೆ. ಬಹುಶಃ ಇದು ಶುಭಕಾರ್ಯಗಳಿಗೆ ಬಳಸಿಕೊಂಡಿರಬಹುದೆಂದು ತಿಳಿಯಲಾಗಿದೆ. ಅದರಂತೆಯೇ ನೈರುತ್ಯ ಭಾಗದಲ್ಲಿಯೂ ಸಹ ಒಂದು ಸಣ್ಣ ದೇವಾಲಯವಿದ್ದು ಅಲ್ಲಿ ಯಾವುದೇ ವಿಗ್ರಹಗಳು ಕಂಡುಬಂದಿಲ್ಲ. ಗರ್ಭಗೃಹ ಮುಖಮಂಟಪ ಮಾತ್ರ ಕಂಡುಬಂದಿದ್ದು ಯಾವುದೆಂದು ತಿಳಿದಿಲ್ಲ.

**ಭುವನೇಶ್ವರಿ**: ಈ ದೇವಾಲಯದಲ್ಲಿ ಭುವನೇಶ್ವರಿಗಳು ಕಂಡುಬಂದಿದ್ದು ಗರ್ಭಗೃಹದಲ್ಲಿ ಒಂದು ಚೌಕಟ್ಟಾದ ಭುವನೇಶ್ವರಿಯಿದ್ದು ಯಾವುದೇ ಶಿಲ್ಪಗಳು ಕಂಡುಬಂದಿಲ್ಲ. ಆದರೆ ಕಮಲದ ಮೊಗ್ಗಿನ ಆಕಾರದ ರಚನೆಯನ್ನು ಕಾಣಬಹುದು. ವೃತ್ತಾಕಾರದ ರಚನೆಯಲ್ಲಿ ಕೆತ್ತಲಾಗಿದೆ. ನಂತರ ನವರಂಗದಲ್ಲಿ ಮಧ್ಯದ ರಂಗದಲ್ಲಿ ಸಾಮಾನ್ಯ ಒಂದು ಚೌಕಟ್ಟಾದ ರಚನೆಯ ಒಳಗೆ ವೃತ್ತಾಕಾರದ ಒಂದು ಚಿತ್ರಣವನ್ನು ಕಾಣಬಹುದು. ಮೂಲಸ್ಥಾನೇಶ್ವರ ದೇವಾಲಯವನ್ನು ಕರ್ನಾಟಕ ಸರ್ಕಾರ ಸಂರಕ್ಷಿತ ಪ್ರಾಚೀನ ಸ್ಮಾರಕ ಎಂದು ಘೋಷಣೆ ಮಾಡಲಾಗಿದೆ. ಹಾಗೂ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ವತಿಯಿಂದ ಸಂರಕ್ಷಿಸಲಾಗುತ್ತಿದೆ. ಕಠಿಣ ಗ್ರಾನೈಟ್ ಶಿಲೆಯಿಂದ ಈ ದೇವಾಲಯ ನಿರ್ಮಾಣ ಮಾಡಲಾಗಿತ್ತು. ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಹಾಳಾಗಿ ಹೋಗಿದ್ದನ್ನು ಇತ್ತೀಚೆಗೆ ಶ್ರೀ ಧರ್ಮಸ್ಥಳ ಟ್ರಸ್ಟ್ ಅವರಿಂದ ಜೀರ್ಣೋದ್ಧಾರವಾಗಿ ಬಹಳ ವರ್ಷ ಬಾಳಿಕೆ ಬರುವ ಎಲ್ಲಾ ಲಕ್ಷಣಗಳು ಕಂಡುಬಂದಿದೆ.

**ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ**: ಈ ದೇವಾಲಯವು ಅತಿ ಪ್ರಾಚೀನ ದೇವಾಲಯವಾಗಿದ್ದು ತಗಡೂರಿನ ಗ್ರಾಮ ಪಂಚಾಯಿತಿಯ ರಸ್ತೆಯ ಬಲಭಾಗದಲ್ಲಿದೆ. ಗರ್ಭಗೃಹ 8ಕ್ಷ5 ಉದ್ದ ಮತ್ತು ಅಗಲವಾಗಿದೆ. ಸುಖನಾಸಿ ನಂತರ 4 ಕಂಬಗಳನ್ನು ಹೊಂದಿರುವ ನವರಂಗವಿದೆ. ಹದಿನಾರು ಕಂಬಗಳ ವಿಶಾಲವಾದ ತೆರೆದ ಹಜಾರವನ್ನು ಒಳಗೊಂಡಿದ್ದು ಇದಕ್ಕೆ ಹೊಂದಿಕೊಂಡಂತೆ ಎಡಭಾಗದಲ್ಲಿ ಒಂದು ಮಂಟಪ, ಮಂಟಪದ ಮುಂದೆ ಒಂದು ವಿಶಾಲವಾದ ಸಭಾಂಗಣವನ್ನು ಕಾಣಬಹುದು. ಅದನ್ನು ಕಲ್ಯಾಣಮಂಟಪ ಅಥವಾ ವಿಶೇಷ ಕಾರ್ಯಕ್ರಮಗಳಿಗೆ ಉಪಯೋಗಿಸಲು ನಿರ್ಮಿಸಲಾಗಿದೆ ಎಂದು ತಿಳಿಯಲಾಗಿದೆ. ಪೂರ್ವಕ್ಕೆ ಮುಖಮಾಡಿದ ಒಂದು ಮಹಾದ್ವಾರವನ್ನು ನಿರ್ಮಿಸಲಾಗಿದ್ದು ಅದು ಬಹಳ ಎತ್ತರವಾಗಿದೆ. ವಾಯುವ್ಯದಲ್ಲಿ ಒಂದು ಸಣ್ಣಗುಡಿಯು ಸಹ ಇದೆ. ಅಲ್ಲದೆ ದೇವಾಲಯದ ಎಡ ಭಾಗಕ್ಕೆ ಒಂದು ತುಳಸಿಕಟ್ಟೆಯನ್ನು ಕಾಣಬಹುದು. ಈ ದೇವಾಲಯವು 50ಮೀ ಉದ್ದ ಮತ್ತು 20 ಮೀ. ಅಗಲವಾಗಿದ್ದು ಬಹಳ ವಿಶಾಲವಾಗಿದೆ. ಈ ದೇವಾಲಯವನ್ನು ಹೊಯ್ಸಳರು ವಿಜಯನಗರ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆ. ಗ್ರಾನೈಟ್ ಕಲ್ಲಿನಿಂದ ಈ ದೇವಾಲಯ ನಿರ್ಮಿಸಿದ್ದು ಬಹಳ ಕಠಿಣವಾಗಿದೆ.

**ಏರುವಿನ್ಯಾಸ**: ಈ ದೇವಾಲಯದ ಏರುವಿನ್ಯಾಸವು ಉತ್ತಮವಾಗಿದ್ದು ಅದಿಷ್ಠಾನ ಭಿತ್ತಿ ಕಪೋತ ಮತ್ತು ಶಿಖರವನ್ನು ಒಳಗೊಂಡಿದೆ. ಪೀಠ ಉಪಪೀಠ, ಪಾದ, ಅದಿಷ್ಠಾನವನ್ನು ಹೊಂದಿದೆ. ನೆಲಮಟ್ಟದಿಂದ 2 ಅಡಿ ಎತ್ತರವಿದ್ದು. ಯಾವುದೇ ಚಿತ್ರಣ, ಬಳ್ಳಿಸುರುಳಿ ಕಂಡುಬಂದಿಲ್ಲ. ಭಿತ್ತಿಯು ಅರೆಕಂಬಗಳಿಂದ ಕೂಡಿದ್ದು ಸಾಮಾನ್ಯ ಕೋಷ್ಠಗುಡಿಗಳನ್ನು ಕಾಣಬಹುದು. ಅಲ್ಲಿ ಯಾವುದೇ ಮೂರ್ತಿಶಿಲ್ಪಗಳು ಕಂಡುಬರುವುದಿಲ್ಲ. ಕಲ್ಲು ಚಪ್ಪಡಿಗಳಿಂದ ಭಿತ್ತಿಯನ್ನು ನಿರ್ಮಿಸಿದ್ದಾರೆ. ಭಿತ್ತಿಯ ಮೇಲೆ ಕಪೋತವಿದ್ದು ಇದು ಸಾಮಾನ್ಯವಾಗಿ ಕಂಡುಬಂದಿದೆ. ಸಣ್ಣ ಸಣ್ಣ ಲಾಳಾಕಾರದ ಕೂಡುಗಳನ್ನು ಇಲ್ಲಿ ಕಾಣಬಹುದು. ಕಪೋತದ ಮೇಲೆ ಹಾರವಿದ್ದು ಸಾಮಾನ್ಯವಾಗಿದೆ. ಗರ್ಭಗುಡಿಯ ಮೇಲೆ ಶಿಖರವನ್ನು ನಿರ್ಮಿಸಿದ್ದಾರೆ. 3 ಹಂತದ ಶಿಖರವನ್ನು ಇಲ್ಲಿ ಕಾಣಬಹುದು. ಈ ಶಿಖರವು ಸುಣ್ಣದ ಗಾರೆ, ಸಿಮೆಂಟ್ ಮತ್ತು ಇಟ್ಟಿಗೆಗಳಿಂದ ನಿರ್ಮಾಣ ಮಾಡಲಾಗಿದೆ. ನವಿಲಿನ ಬಾಲದಿಂದ ಹೊರಟ ಲಾಳಾಕಾರದ ಕೂಡುಗಳಿದ್ದು ಅದರೊಳಗೆ ವಿಗ್ರಹಗಳನ್ನು ಕಾಣಬಹುದು. ಅದರಲ್ಲಿ ಕಾಳಿಂಗ ಮರ್ದನ, ಅಂಬೆ ಗಾಲಿನ ಕೃಷ್ಣ, ಭೈರವ ಅದರ ಪಕ್ಕದಲ್ಲಿ ಆನೆ-ಕುದುರೆ ಸಾಲುಗಳು, ಎರಡನೆ ಹಂತದಲ್ಲಿ ಚಿಕ್ಕಚಿಕ್ಕ ಕಂಬಗಳಿವೆ. ಕೊನೆಯ ಹಂತದಲ್ಲಿ ವೃತ್ತಾಕಾರದ ಗ್ರೀವವಿದ್ದು ಅದರ ಮೇಲೆ ಕಳಸವನ್ನು ಪ್ರತಿಷ್ಠಾಪಿದ್ದಾರೆ.

**ಕಂಬಗಳು**: ನವರಂಗದಲ್ಲಿ ನಾಲ್ಕು ಕಂಬಗಳನ್ನು ಒಳಗೊಂಡಿದ್ದು ಹೋಯ್ಸಳ ಶೈಲಿಯಲ್ಲಿ ಬಹಳ ವಿಶೇಷವಾಗಿವೆ. ಈ ಕಂಬವು ಪೀಠ, ಪಾದ, ವೃತ್ತಕಾರದ ಗಾಡಿ, ಲಕುನ, ತಟಿಕ, ಘಟ, ಮಂಡಿ ಬೋದಿಗೆ, ಗ್ರೀವ, ಶಿರ ಒಳಗೊಂಡಿದೆ. ಆದರೆ ಮೇಲೆ ಅಡ್ಡಪಟ್ಟಿಕೆ ಅದರ ತೊಲೆಗೆ ಕೋರಿಸಲಾಗಿದೆ. ಈ ನಾಲ್ಕು ಕಂಬದ ಮೇಲೆ ಪೀಠದ ಭಾಗದಲ್ಲಿ ಲಿಪಿಯನ್ನು ಕೆತ್ತಲಾಗಿದೆ. ಹಜಾರದಲ್ಲಿ 20 ಕಂಬಗಳನ್ನು ಒಳಗೊಂಡಿದ್ದು ಪೀಠದ ಭಾಗವು ಚೌಕಕಾರವಾಗಿದ್ದು. ಮೇಲೆ ಒದಂತೆ ವೃತ್ತಕಾರವಾಗಿದೆ. ಹಜಾರದ ಬಲಭಾಗಕ್ಕೆ ಸೇರಿದಂತೆ 24 ಕಂಬಗಳಿವೆ. ಇವು ಎತ್ತರವಾಗಿದ್ದು, ಇದರ ಮುಂದಿನ ಸಭಾಂಗಣದಲ್ಲಿ 30 ಕಂಬಗಳು ಇವೆ. ಇವುಗಳು ಬಹಳ ಎತ್ತರವಾಗಿದ್ದು, ಯಾವುದೆ ಶಿಲ್ಪಗಳು ಕಂಡು ಬರುವುದಿಲ್ಲ ವಿಜಯನಗರ ಕಾಲಕ್ಕೆ ಸೆರಿದ್ದಾಗಿವೆ.

**ಮೂರ್ತಿ ಶಿಲ್ಪಗಳು**: ಈ ದೇವಾಲಯದ ಗರ್ಭಗುಡಿಯ ವಿಷ್ಣುವಿನ ಮೂರ್ತಿಯು ಸುಮಾರು 5 ಅಡಿಎತ್ತರ ವಿದ್ದು ಗರುಡ ಪೀಟದ ಮೇಲೆ ಪ್ರತಿಷ್ಠಾಪನೆ ಮಾಡಲಾಗಿದೆ. ಶಂಕಚಕ್ರ, ಗಧಪದ್ಮ, ಸಮಭಂಗಿಯಲ್ಲಿ ನಿಂತಿರುವ ಮೂರ್ತಿ ಶಿಲ್ಪವಾಗಿದೆ. ನವರಂಗದ ಕಂಬದಲ್ಲಿ ಎಲ್ಲಾ ಕಂಬದಲ್ಲಿಯು ವಿವಿಧ ರೀತಿಯ ಶಿಲ್ಪಗಳನ್ನು ಚಿತ್ರಿಸಲಾಗಿದೆ, ಅವುಗಳಲ್ಲಿ ಕೋತಿಯ ಚಿತ್ರ, ಜಿಂಕೆಯ ಚಿತ್ರಣ, ಸಿಂಹ ಮುಖ ಕೋತಿಯ ದೇಹದ ಉಬ್ಬು ಶಿಲ್ಪವನ್ನು ಕೆತ್ತನೆ

ಮಾಡಲಾಗಿದೆ. ಹಾಗೆಯೇ ನವರಂಗದಲ್ಲಿ ಲಕ್ಷ್ಮಿ ವಿಗ್ರಹ, ಬೋದೇವಿ, ಯಾದೇವಿ ಇಂತಹ ವಿಗ್ರಹಗಳನ್ನ ಕಾಣಬವುದಾಗಿದೆ. ಆಗಿದೆ. ಇದರ ಮುಂದಿನ ಹಜಾರದಲ್ಲಿ ಗಜಲಕ್ಷ್ಮೀಯ ವಿಗ್ರಹವಿದೆ.

**ದ್ವಾರ ಹಾಗೂ ಮಂಟಪಗಳು**: ಈ ದೇವಾಲಯವು ಗರ್ಭಗೃಹದಿಂದ ಸುಖನಾಸಿಗೆ ಒಂದು ದ್ವಾರವನ್ನು ಹೊಂದಿದ್ದು, ಹಾಗೆಯೇ ಸುಖನಾಸಿಯಿಂದ ನವರಂಗಕ್ಕೆ ನೆರವಾದ ಪ್ರವೇಶವನ್ನು ಹೊಂದಿದೆ. ನವರಂಗದ ಮುಂದಿನ ದ್ವಾರವು ವಿಶೇಷವಾಗಿದ್ದು ದ್ವಾರಬಂಧವು ಹೊಯ್ಸಳ ಶೈಲಿಯನ್ನು ಹೋಲುತ್ತದೆ. ವಿಶಾಲವಾದ ಹಜಾರವನ್ನು ಹೊಂದಿದ್ದು, ಅದಕ್ಕೆ ಸುಂದರವಾದ ಸೋಪಾನಗಳನ್ನು ನಿರ್ಮಾಣ ಮಾಡಿದ್ದು, ಆ ಸೋಪಾನವು ವ್ಯಾಳದ ಅಲಂಕಾರವನ್ನು ಹೊಂದಿದೆ. ವಿಜಯನಗರ ಕಾಲದ ಮಹದ್ವಾರವಿದ್ದು, ಈ ದೇವಾಲಯದಲ್ಲಿ ಸುಂದರ ಕತ್ತನೆಯ ಪೀಠ, ಉಪಪೀಠ, ಪಾದ, ಅಧಿಷ್ಠಾನ, ಬಿತ್ತಿ, ಕಪೂತ ಈ ರೀತಿಯ ಏರು ವಿನ್ಯಾಸವನ್ನು ಹೊಂದಿದೆ. ಭಿತ್ತಿಯಲ್ಲಿ ಅರೆಗಂಬಗಳು ಕಂಡುಬಂದಿವೆ. ಹಿಗೆಯೇ ಈ ದೇವಾಲಯದಲ್ಲಿ ಕಪೂತದಲ್ಲಿ ಜಿಂಕೆಯ ಶಿಲ್ಪಗಳು, ಗಣಪತಿ, ಜಿಂಕೆಯನ್ನು ಬೇಟೆಯಾಡುವ ಶಿಲ್ಪಗಳು, ಸಿಂಹಮೂಖವುಳ್ಳ ಶಿಲ್ಪ ಮುಂತಾದ ಶಿಲ್ಪಗಳು ಕೆತ್ತನೆ ಮಾಡಲಾಗಿದೆ. ಮಹಾದ್ವಾರದಲ್ಲಿ ಒಳಕ್ಕೆ ಹೊಗುವ ಎರಡು ಬದಿಯ ಇಕ್ಕೆಲಗಳಲ್ಲಿ ಅರೆಗಂಬಗಳಲ್ಲಿ ಬಾಳೆಗೋನೆಯ ಮೋಗ್ಗಿನ ಸಾಧಾರಣ ರಿತೀಯ ಪ್ರಾಣಳ ಇದೆ. ನೋಡಲು ಸುಂದರವಾಗಿದ್ದು ಸ್ವಾಗತ ಕೋರುವಂತೆ ಕಾಣುತ್ತವೆ.

**ಭುವನೇಶ್ವರಿಗಳು**: ಈ ದೇವಾಲಯದಲ್ಲಿ ವಿಶೇಷವಾದ ಭುವನೇಶ್ವರಿಗಳನ್ನು ಕಾಣಬಹುದು. ಗರ್ಭಗೃಹದಲ್ಲಿ ಒಂದು ಸುಂದರವಾದ ಭುವನೇಶ್ವರಿ ಇದ್ದು ಚತುರ್ತತಲ, ಚೌಕಕಾರದ ನಾಬಿಚಂದ, ಪದ್ಮಪುಷ್ಪವಿದೆ ಚೌಕ ಭಾಗದ ಮೂಲೆಗಳಲ್ಲಿ ಕಮಲದ ಹೂವಿನ ಚಿತ್ರಣ ಬಿಡಿಸಲಾಗಿದೆ, ಮಧ್ಯಭಾಗದಲ್ಲಿ ಕಮಲದ ಪದ್ಮ ರಚನೆ ಇದ್ದು ಮೂಗ್ಗಿನ ಧಳ ಚಾಚಿದಂತೆ ಬಿಡಿಸಲಾಗಿದೆ. ನವರಂಗದಲ್ಲಿ ಭುವನೇಶ್ವರಿಯು ಕಂಡು ಬಂದಿದೆ. ತ್ರಿತಲ ಕಾರದ ಚೌಕವನ್ನು ಹೊಂದಿದ್ದು ಮೂಲೆಗಳಲ್ಲಿ ಕಮಲದ ಹೂವಿನ ಚಿತ್ರಣ ಬಡಿಸಲಾಗಿದೆ. ಇತ್ತಿಚಿಗೆ ನಾಭಿಚಂದ ಎತ್ತರ ಗೋಳಾಸಿ ಬೆಳಕು ಬರುವಂತೆ ಮಾಡಲಾಗಿದೆ.

**ಅಂಕನಾಥೇಶ್ವರ ದೇವಾಲಯ**: ಈ ಊರಿನ ಸುಧೀರ್ಘ ಚರಿತ್ರೆಯ ಜೊತೆಯಲ್ಲಿಯೇ ತನ್ನ ಚರಿತ್ರೆಯನ್ನು ಸೇರಿಸಿಕೊಂಡಿರುವ ದೇವಸ್ಥಾನವೆಂದರೆ ಅಂಕನಾಥೇಶ್ವರ ದೇವಸ್ಥಾನ. ಗರ್ಭಗುಡಿಯೊಳಗಿರುವ ಅಂಕನಾಥೇಶ್ವರನ ಮೂರ್ತಿಯ ದೃಷ್ಠಿಯಿಂದ ಹಾಗೆಯೇ ದೇಗುಲದ ವಾಸ್ತುಶಿಲ್ಪದ ದೃಷ್ಟಿಯಿಂದಲೂ ಈ ದೇವಸ್ಥಾನ ಗಮನಾರ್ಹವಾದುದಾಗಿದೆ. ಇಂತಹ ಸುಂದರವಾದ ದೇವಸ್ಥಾನವು ಒಮ್ಮೆಲೆ ಕಟ್ಟಿದುದಲ್ಲ. ಮೊಟ್ಟಮೊದಲ ಬಾರಿಗೆ ರಾಜರಾಜೇಂದ್ರ ಚೋಳನು ಗರ್ಭಾಂಕಣ, ಸುಕನಾಸಿ, ಅದರ ಮುಂದೆ 9 ಅಂಕಣದ ನವರಂಗವನ್ನು ಕಟ್ಟಿಸಿದನು. ಅನಂತರದ ದಿನಗಳಲ್ಲಿ ತೆರಕಣಾಂಬಿಯಲ್ಲಿ ಆಳುತ್ತಿದ್ದ ಹರಿಹರರಾಯನ ಮಗ ವೀರರಾಯನು ಕ್ರಿ.ಶ. 1620 ರಲ್ಲಿ ನವರಂಗದ ಮುಂದೆ 14 ಅಂಕಣವನ್ನು ನಿರ್ಮಿಸಿದನು. ಹೀಗೆ ಕಾಲಕಾಲಕ್ಕೆ ವಿಸ್ತಾರಗೊಂಡ ಈ ದೇವಸ್ಥಾನ ತಗಡೂರಿನ ಆರಾಧ್ಯ ದೈವವಷ್ಟೇ ಅಲ್ಲ ತಮಿಳುನಾಡಿನಲ್ಲೂ ಭಕ್ತರನ್ನು ಹೊಂದಿರುವುದು ಸೂಜಿಗದ ಸಂಗತಿ. ಈಶ್ವರನನ್ನು ಅಂಕನಾಥ ಎಂದು ಕರೆದು ಆರಾಧಿಸುವುದಕ್ಕೆ ಒಂದು ಕಾರಣವೂ ಇದೆ. ಒಂದು ಕಾಲದಲ್ಲಿ ಕೋಟೆಯಿಂದ ಸುತ್ತುವರಿಯಲ್ಪಟ್ಟಿದ್ದ ನಮ್ಮ ಗ್ರಾಮದ ಕೋಟೆಯ ಹೆಬ್ಬಾಗಿಲಿಗೆ ಅಂಕ ಎಂದು ಕರೆಯುವುದು ಆಡು ಮಾತಿನಲ್ಲಿ ಪ್ರಚಲಿತವಿದೆ. ಅಂಕದ ಬಾಗಿಲಿನ ಬಳಿಯೇ ಇದ್ದಂತಹ ದೇವಸ್ಥಾನದ ಈ ಮೂರ್ತಿಯನ್ನು ಜನ 'ಅಂಕನಾಥೇಶ್ವರ 'ನೆಂದೇ ಕರೆಯತೊಡಗಿದರು.

ಈ ದೇವಾಲಯವು ತಗಡೂರು ಗ್ರಾಮದ ಪ್ರಮುಖ ದೇವಾಲಯವಾಗಿದ್ದು, ಸುತ್ತಮುತ್ತಲಿನ ಗ್ರಾಮಗಳಲ್ಲೇ ಪ್ರಸಿದ್ಧ ಗುಡಿಯಾಗಿದೆ. ದೇವಾಲಯವು ಒಂದೇ ಅನುಷ್ಠಾನದಲ್ಲಿ ಎರಡು ದೇವಾಲಯಗಳನ್ನು ಒಳಗೊಂಡಿದೆ. ಒಂದು ದೇವಾಲಯ ಪೂರ್ವ ಮುಖವಾಗಿದೆ, ಇನ್ನೊಂದು ದಕ್ಷಿಣ ಮುಖವಾಗಿದೆ.ಒಂದು ದೇವಾಲಯ ಪೂರ್ವದ್ದು ಗರ್ಭಗೃಹ ಇಲ್ಲಿ ಅಂತರಾಳ ಕೂಡಬಂದಿದೆ. ಆದರೆ ಕಾಲನಂತರ ಅದಕ್ಕು ಒಂದು ದ್ವಾರ ನಿರ್ಮಿಸಿದ್ದಾರೆ ನಂತರ ನವರಂಗ ಕಂಡುಬಂದಿದ್ದು ಸಾಮಾನ್ಯ ಕಂಭಗಳಿಂದ ನಿರ್ಮಾಣವಾಗಿದೆ. ಇಲ್ಲಿ ಮುಖಮಂಟಪ ಕಂಡುಬಂದಿಲ್ಲ. ಇಲ್ಲಿ ದಕ್ಷಿಣದ್ವಾರದ ಇನ್ನೊಂದು ದೇವಾಲಯ ಕೂಡುತ್ತದೆ. ದಕ್ಷಿಣ ದೇವಾಲಯ ಗರ್ಭಗೃಹ ಸುಖನಾಸಿ ನವರಂಗವು ಪೂರ್ವಮುಖ ದೇವಾಲಯಕ್ಕೆ ಸೇರುತ್ತದೆ. ಈ ದೇವಾಲಯದ ರಚನೆ ಬಹಳ ವಿಶೇಷವಾಗಿದೆ.

**ಏರು ವಿನ್ಯಾಸ**: ಈ ದೇವಾಲಯದ ಏರು ವಿನ್ಯಾಸ ಸಾಮಾನ್ಯವಾಗಿದ್ದು ಅದಿಷ್ಠಾನವು ಸಾಮಾನ್ಯವಾಗಿ ಕಂಡುಬಂದಿದ್ದು ಇದು ಎರಡು ಹಂತದಲ್ಲಿ ಕಂಡುಬರುತ್ತದೆ. ಪೀಠ ಮತ್ತು ಉಪಪೀಠವನ್ನು ಮಾತ್ರ ಇದು ಒಳಗೊಂಡಿದೆ. ಭಿತ್ತಿಯು ಕಲ್ಲು ಚಪ್ಪಡಿಯಿಂದ ನಿರ್ಮಾಣವಾಗಿದ್ದು ಅಲ್ಲಲ್ಲಿ ಅರೆಗಂಬಗಳು ಕಂಡುಬರುತ್ತವೆ. ಎರಡು ಜಾಗದಲ್ಲಿ ಮದಗಜಗಳ ಕಾಳಗ ಹಾಗು ಗಜಲಕ್ಷ್ಮಿ ಕೆತ್ತನೆಯನ್ನು ಕಾಣಬಹುದು. ಕಪೋತವು ಸರಳವಾಗಿದ್ದು ಹಾರವನ್ನು ಮತ್ತು ಗೋಪುರವನ್ನು ಇಟ್ಟಿಗೆ ಮತ್ತು ಸಿಮೆಂಟಿನಿಂದ ನಿರ್ಮಾಣ ಮಾಡಲಾಗಿದೆ. ಇದು ಸಾಮಾನ್ಯವಾಗಿದ್ದು ಯಾವುದೇ ವಿಶೇಷ ವಿನ್ಯಾಸವು ಕಂಡುಬರುವುದಿಲ್ಲ. ಈ ದೇವಾಲಯದ ಸುತ್ತಲು ಗೋಡೆಯನ್ನು (ಕಾಂಪೋಂಡ್) ನಿರ್ಮಿಸಲಾಗಿದ್ದು ಕೂಡುಗಳನ್ನು ಒಳಗೊಂಡಿದೆ.

**ಕಂಬಗಳು**: ಕಂಬಗಳು ಸಾಮಾನ್ಯವಾಗಿದ್ದು, ಪೀಠವು ಚೌಕಾಕಾರವಾಗಿ ಮೇಲೆ ಹೋದಂತೆ ವೃತ್ತಾಕಾರದ ವಿನ್ಯಾಸವನ್ನು ಹೊಂದಿದೆ. ಅದರ ಮೇಲೆ ಬೋದಿಗೆಯಿಟ್ಟು ತೊಲೆಗೆ ಅಳವಡಿಸಲಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳು ಕಂಡುಬಂದಿದ್ದು ಅವುಗಳು ಸಹ ಚೌಕಾಕಾರದಲ್ಲಿವೆ.

**ಮೂರ್ತಿ ಶಿಲ್ಪಗಳು**: ಈ ದೇವಾಲಯವು 2 ಭಾಗವನ್ನು ಹೊಂದಿರುವುದರಿಂದ ಹಲವು ಮೂರ್ತಿ ಶಿಲ್ಪಗಳನ್ನು ಒಳಗೊಂಡಿದೆ. ಪೂರ್ವ ಮುಖದ ಗರ್ಭಗುಡಿಯಲ್ಲಿ ಶಿವಲಿಂಗವನ್ನು ಕಾಣಬಹುದು. ಅಲ್ಲಿಂದ ಸುಖನಾಸಿ ನವರಂಗದಲ್ಲಿ ಯಾವುದೇ ನವರಂಗಗಳಲ್ಲ. ಮುಂದಿನ ಹಜಾರದಲ್ಲಿ ಗಣೇಶ, ಸೂರ್ಯದೇವ, ಚನ್ನ ಮಾದೇಶ್ವರ, ನಾರಾಯಣ, ಕಾಶಿಲಿಂಗ, ನಟರಾಜ ದಕ್ಷಿಣಮೂರ್ತಿ, ಭೈರವ, ಮುಂತಾದ ಶಿಲ್ಪಗಳಿವೆ. ದಕ್ಷಿಣ ಮುಖದ ಗರ್ಭಗುಡಿಯಲ್ಲಿ ಅಂಕನಾಥೇಶ್ವರನ ಮೂರ್ತಿಶಿಲ್ಪವಿದ್ದು, ನಿಲುಭಂಗಿಯಲ್ಲಿ ನಿಂತಿದೆ. ನವರಂಗದ ಛಾವಣಿಯಲ್ಲಿ ಆಮೆಯ ಕೆತ್ತನೆ, ನೃತ್ಯಭಂಗಿಯ ಡೋಳು ಬಡಿಯುವ ಉಬ್ಬು ಶಿಲ್ಪಗಳನ್ನು ಕಾಣಬಹುದು.

**ಭುವನೇಶ್ವರಿಗಳು**: ಗರ್ಭಗೃಹದಲ್ಲಿ ಭುವನೇಶ್ವರಿ ಇದ್ದು ಚೌಕಟ್ಟಾಗಿದೆ. ಎರಡು ಹಂತದಲ್ಲಿ ಕಮಲ ಪದ್ಮದಳದ ರಚನೆಯನ್ನು ಹೊಂದಿದೆ. ಬಹಳ ಸುಂದರ ಕೆತ್ತನೆಯನ್ನು ಕಾಣಬಹುದಾಗಿದೆ. ಪೂರ್ವದ ಗರ್ಭಗುಡಿಯಲ್ಲಿ ಭುವನೇಶ್ವರಿಯು ಬಹಳ ಸುಂದರವಾಗಿದ್ದು ತ್ರಿತಲದಲ್ಲಿ ನಿರ್ಮಿಸಲಾಗಿದೆ. ಚೌಕಾಟ್ಟಾದ ಮೂಲೆಗಳಲ್ಲಿ ಕಮಲದ ಹೂವಿನ ಚಿತ್ರಗಳನ್ನು ಕಾಣಬಹುದು. ಹಾಗೂ ನಾಭಿಚಂದ, ಕಮಲದ ಹೂವಿನ ದಳದ ರೀತಿಯ ಕೆತ್ತನೆಯನ್ನು ಕಾಣಬಹುದು.

**ಛಾಯಾಚಿತ್ರಗಳು**



ಮೂಲಸ್ಥಾನೇಶ್ವರ ದೇವಾಲಯ



ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ



ಅಂಕನಾಥೇಶ್ವರ ದೇವಾಲಯ

**ಪರಾಮರ್ಶನ ಗ್ರಂಥಗಳು**


1. ಹಾ.ಮಾ.ನಾಯಕ್ (ಸಂ) ಎಪಿಗ್ರಾಫಿಯ ಕರ್ನಾಟಕ ಮೈಸೂರು,ಮೈಸೂರು ವಿ.ವಿ. 1972.
2. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ ಪ್ರಕಾಶಕರು, ಮೈಸೂರು–2007.
3. ಶ್ರೀಕಂಠಶಾಸ್ತ್ರಿ ಎಸ್. : ಭಾರತೀಯ ಸಂಸ್ಕೃತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು 2006.
4. ಎಪಿಗ್ರಫಿಯ ಕರ್ನಾಟಕ : ಸಂಪುಟ–03, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 2007.
5. ಶಿವನಂಜನಪ್ಪ : ಜಂಗಮ (ತಗಡೂರು ಗ್ರಾಮದ ಪಕ್ಷಿನೋಟ)
6. ಚಿದಾನಂದಮೂರ್ತಿ ಎಂ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
7. ಕನ್ನಡ ವಿಷಯ ವಿಶ್ವಕೋಶ : ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. 2009.